**ದಿನಾಂಕಃ 01.07.2025 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀ ಡಿ ಕೆ ಪಿ ವಕೀಲರಿಂದಃ**

ರಸೀದಿಗಳನ್ನು ನಿಡಿ–7 ಮತ್ತು 8, ಅಸ್ಸೆಸ್ಮೆಂಟ್ ಮತ್ತು ಡಿಮ್ಯಾಂಡ್ ರಜಿಸ್ಟರ್ ನಿಡಿ–9, ನೋಟೀಸ್ ನಿಡಿ–10 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ವಾದಿ ಪರ ಶ್ರೀ ಎಂ ಆರ್ ಪಿ ವಕೀಲರಿಂದ.**

ದಾವಾ ಆಸ್ತಿಯ ಬಗ್ಗೆ ಫಾರಂ ನಂ.7(ಎ) ಹಾಕಲು ಯಾರು ಹೇಳಿರುತ್ತಾರೆ ಅಂದರೆ ಸಾಕ್ಷಿ ಆವಾಗಾ ಕಾಯ್ದೆ ಬಂದಿತ್ತು ಆನವಟ್ಟಿಗೆ ಡಿ.ಸಿ.ರವರು ಬಂದಾಗ ನನ್ನ ತಮ್ಮ ಫಾರಂ ನಂ.7(ಎ) ಹಾಕಿರುತ್ತಾನೆ ಎನ್ನುತ್ತಾರೆ. ಫಾರಂ ನಂ.7(ಎ) ಯನ್ನು ಯಾವಾಗ ಹಾಕಿರುತ್ತೀರಿ ಅಂದರೆ ಸಾಕ್ಷಿ ಇಸವಿ ಗೊತ್ತಿಲ್ಲ ಆದರೆ 26 ವರ್ಷಗಳ ಹಿಂದೆ ಹಾಕಿರುತ್ತೇವೆ ಎನ್ನುತ್ತಾರೆ. ಫಾರಂ ನಂ.7(ಎ) ಯನ್ನು ಈ ಹಿಂದಿನ ಕೇಸ್ ಗಳಲ್ಲಿ ಹಾಜರು ಮಾಡಿರುತ್ತೀಯಾ ಅಂದರೆ ಸಾಕ್ಷಿ ಕೆಳಗಿನ ನ್ಯಾಯಾಲಯದಲ್ಲಿ ಹಾಜರು ಮಾಡಿರುತ್ತೇನೆ ಎನ್ನುತ್ತಾರೆ. ನಿಡಿ–10 ನ್ನು ಈ ಕೇಸಗೋಸ್ಕರ್ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ. ದಾವಾ ಸ್ವತ್ತು ಖಾನೆಶಮರಿ ಸ್ವತ್ತು ಅಂದರೆ ಸರಿ. ಖಾನೆಶಮರಿ ಸ್ವತ್ತಿಗೆ ಸಂಬಧಪಟ್ಟಂತೆ ಫಾರಂ ನಂ.7(ಎ)ಯನ್ನು ಭೂ ನ್ಯಾಯಾ ಮಂಡಳಿಗೆ ಸಲ್ಲಿಸಲು ಭೂ ಸುಧಾರಣೆ ಕಾಯ್ದೆ ಯಡಿಯಲ್ಲಿ ಅವಕಾಶ ಇರುವುದಿಲ್ಲ ಅಂದರೆ ಸರಿಯಲ್ಲ. ಈ ದಾವೆಯನ್ನು ಮುಂದೂಡುವ ಸಂಬಂಧ ನಾನು ಈ ತರಹದ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.